**ಇಂದು ದಿನಾಂಕ 22.07.2025 ರಂದು ಪಿಡಬ್ಲ್ಯೂ -1 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ವಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

**1.** ನಾನು 8 ನೇ ತರಗತಿ ಓದಿದ್ದೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನನ್ನ ತಂದೆಯ ಹೆಸರು ಗೋಪಾಲಪ್ಪ. ದಾವಾ ಆಸ್ತಿಗಳು ಮೂಲತಃ ನನ್ನ ತಾತನಿಗೆ ಸೇರಿದ ಆಸ್ತಿಗಳು. ನಮ್ಮ ಮುತ್ತಾತ ಮೃತರಾದ ನಂತರ ಅವರಿಗೆ 4 ಜನ ಮಕ್ಕಳಿದ್ದರು. ಅವರು ಮೃತರಾದ ನಂತರ ವಿಭಾಗ ಮಾಡಿಕೊಂಡಿದ್ದಾರ ಎಂದರೆ ದಾವಾ ಆಸ್ತಿಗಳನ್ನು ಮಾಡಿಕೊಂಡಿಲ್ಲ. ದಾವಾ ಆಸ್ತಿಗಳು ಇದುವರೆಗೂ ಭಾಗವಾಗಿಲ್ಲ ಎಂದರೆ ನಿಜ. ನನ್ನ ತಾತನಿಗೆ ಸೇರಿದ ಆಸ್ತಿಗಳಿಗೆ ಖಾತೆ ಇತ್ತು ಎಂದರೆ ನಿಜ. ದಾವಾ ಆಸ್ತಿಗಳಿಗೆ ನನ್ನ ಹೆಸರಿಗೆ ಮ್ಯೂಟೇಶನ್ ಆಗಿಲ್ಲ. ದಾವಾ ಆಸ್ತಿಗಳಿಗೆ ಕಂದಾಯವನ್ನು ಕಟ್ಟುತ್ತಿರಲಿಲ್ಲ. ನಮ್ಮ ತಾತ ಮೃತರಾದ ನಂತರ ದಾವಾ ಆಸ್ತಿಗಳನ್ನು ಗೋಪಾಲಪ್ಪ ಮತ್ತು ಅವರ ಮಕ್ಕಳು ಮತ್ತು ನನ್ನ ಚಿಕ್ಕಪ್ಪ ಅನುಭವಿಸಿಕೊಂಡು ಬರುತ್ತಿದ್ದಾರೆ. ದಾವಾ ಆಸ್ತಿಗಳ ಖಾತೆ ಆಗಿದೆಯಾ ಎಂದರೆ ನನ್ನ ತಾತನಿಗೆ ಆಗಿದೆ ಎನ್ನುತ್ತಾರೆ. ದಾವಾ ಆಸ್ತಿಗಳ ಪಹಣಿ ಈಗ ಯಾರ ಹೆಸರಿನಲ್ಲಿದೆ ಮತ್ತು ದಾವಾ ಆಸ್ತಿಗಳು ಯಾರ ಅನುಭವದಲ್ಲಿ ಇದೆ ಎಂದರೆ ನಾವೇ ಅನುಭವದಲ್ಲಿದ್ದೇವೆ. ಪಿಳ್ಳೇಗೌಡ ಮತ್ತು ಮುನೇಗೌಡರವರು ಅವರ ಹೆಸರಿಗೆ ಖಾತೆ ಮತ್ತು ಪಹಣಿ ಮಾಡಿಸಿಕೊಂಡಿದ್ದಾರೆ. ಖಾತೆ ಸರಿ ಇಲ್ಲ ಎಂದು ರೆವಿನ್ಯೂ ಅಧಿಕಾರಿಗಳ ಮುಂದೆ ಕ್ರಮ ತೆಗೆದುಕೊಂಡಿಲ್ಲ. ಮ್ಯೂಟೇಶನ್ ಯಾರ ಹೆಸರಿನಲ್ಲಿ ಆಗಿದೆಯೋ ಅವರ ಹೆಸರಿನಲ್ಲಿ ಪಹಣಿ ಇದೆ ಎಂದರೆ ನಿಜ. ಯಾರ ಹೆಸರಿನಲ್ಲಿ ಪಹಣಿ ಇದೆಯೋ ಅವರೇ ಕಂದಾಯ ಕಟ್ಟುತ್ತಿದ್ದಾರೆ ಎಂದರೆ ಗೊತ್ತಿಲ್ಲ. ದಾವೆ ಹಾಕುವಾಗ ನಮ್ಮ ಹೆಸರಿನಲ್ಲಿ ಯಾವುದೇ ದಾಖಲೆಗಳು ಇರಲಿಲ್ಲ ನನ್ನ ತಾತನ ಹೆಸರಿನಲ್ಲಿ ಇತ್ತು. ನಮಗೆ ಗೊತ್ತಾಗದಾಗೆ ಅವರ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದರು ಆದ ಕಾರಣ ದಾವೆ ಹಾಕಿದ್ದೇವೆ. ದಾವಾ ಆಸ್ತಿಗಳ ಮ್ಯೂಟೇಶನ್‌ನ್ನು ನಮ್ಮ ಹೆಸರಿಗೆ ಯಾವಾಗಲೂ ಮಾಡಿಸಿಕೊಂಡಿಲ್ಲ. ಬಚ್ಚಪ್ಪನಿಗೆ 1968-69 ರಲ್ಲಿ ಆರ್.ಟಿ.ಸಿ. ಇದ್ದ ಬಗ್ಗೆ ಯಾವುದೇ ಮ್ಯೂಟೇಶನ್ ಇಲ್ಲ ಎಂದರೆ ಗೊತ್ತಿಲ್ಲ. ನಿಪಿ-5 ಮತ್ತು 6 ರಲ್ಲಿ ಬಚ್ಚಪ್ಪ ಎಂದು ಹೆಸರು ಇದ್ದು ಅದಕ್ಕೆ ಯಾವುದೇ ಮ್ಯೂಟೇಶನ್ ಇಲ್ಲ ಎಂದರೆ ಗೊತ್ತಿಲ್ಲ ಎಂದು ಹೇಳಿ ಆನಂತರ ಬರೆದಿಲ್ಲ ಎನ್ನುತ್ತಾರೆ. ನಿಪಿ-7 ರಲ್ಲಿ ಇರುವ ಬರಹ ಕಪ್ಪು ಶಾಯಿಯಲ್ಲಿದೆ ಎಂದರೆ ನಿಜ. ನಿಪಿ-11, 12 ಮತ್ತು 13 ರಲ್ಲಿ ಆರ್.ಆರ್. ಎಂದು ಯಾವ ನಂಬರ್ ಇಲ್ಲ ಎಂದರೆ ನಿಜ. ನಿಪಿ-31 ರಿಂದ 40 ರಲ್ಲಿ ಪ್ರತಿವಾದಿಗಳ ಹೆಸರು ಇದ್ದು ಮ್ಯೂಟೇಶನ್ ಆದೇಶ ನಮೂದಾಗಿದೆ ಎಂದರೆ ನಿಜ.

ನನ್ನ ಮುತ್ತಾತ ಮತ್ತು ಅವರ ಅಣ್ಣ-ತಮ್ಮಂದಿರ ಮಧ್ಯೆ ಬರವಣಿಗೆಯಲ್ಲಿ ಭಾಗವಾಗಿಲ್ಲ. ದಾವಾ ಆಸ್ತಿಗಳು ಪ್ರತಿವಾದಿಗಳ ಆಸ್ತಿಗಳು ನಾವು ರೆವಿನ್ಯೂ ದಾಖಲೆಗಳಲ್ಲಿ ನಮ್ಮ ಹೆಸರನ್ನು ಬದಲಾಯಿಸಲು ಪ್ರಯತ್ನ ಪಟ್ಟೆವು ಎಂದರೆ ಸರಿಯಲ್ಲ. ನಮ್ಮ ತಂದೆಗೆ ನಮ್ಮ ತಾತನಿಂದ ದಾವಾ ಆಸ್ತಿಗಳು ಬಂದವು ಎಂದು ತೋರಿಸಲು ದಾಖಲೆ ಇದೆ. ಆದರೆ ದಾವಾ ಆಸ್ತಿಗೆ ಸಂಬಂಧಿಸಿದಂತೆ ಇಲ್ಲ. ದಾವಾ ಆಸ್ತಿಗಳು ಪ್ರತಿವಾದಿಗಳಿಗೆ ಪಿತ್ರಾರ್ಜಿತವಾಗಿ ಬಂದಿವೆ ಎಂದರೆ ಸರಿಯಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

Sd/-
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**